## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ಬಳ್ಳಾರಿ ಜಿಲ್ಲೆಯ ಗ್ರಾಮಗಳ ಆಯ್ಕೆ ಅನುಮೋದನೆ ಕುರಿತು.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:29.06.2012

2. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:04.07.2012

3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿರವರ ಪತ್ರ ಸಂಖ್ಯೆ:ಜಿಪಂಬ:ಯೋವಿ:5ನೇಹಂತ:7021:2012-13, ದಿ:26.10.2012.

ಪ್ರಸ್ತಾವನೆ:

2012-13ನೇ ಸಾಲಿನ ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ 1000 ಗ್ರಾಮಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. 5ನೇ ಹಂತದ ಯೋಜನೆಯ ಅನುಷ್ಠಾನ ಮಾಡುವ ಬಗ್ಗೆ, ಗ್ರಾಮಗಳ ಆಯ್ಕೆ, ಅನುದಾನ ಹಂಚಿಕೆ ಇತ್ಯಾದಿ ವಿಷಯಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ವಿವರವಾಗಿ ಮೇಲೆ ಓದಲಾದ (1) ಮತ್ತು (2)ರ ಸರ್ಕಾರದ ಆದೇಶ ಹಾಗೂ ಸುತ್ತೋಲೆಯನ್ನು ಹೊರಡಿಸಲಾಗಿದೆ. ಅದರನ್ವಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿರವರು ನಿಯಮಾನುಸಾರ ಶಾಸಕರ ಶಿಫಾರಸಿನೊಂದಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದಿಸಲ್ಪಟ್ಟ ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನ 10 ಗ್ರಾಮಗಳು, ಹೂವಿನ ಹಡಗಲಿ ತಾಲ್ಲೂಕಿನ 05 ಗ್ರಾಮಗಳು, ಹೊಸಪೇಟೆ ತಾಲ್ಲೂಕಿನ 07 ಗ್ರಾಮಗಳು, ಹಗರಿಬೊಮ್ಮನಹಳ್ಳಿ ತಾಲ್ಲೂಕಿನ 06 ಗ್ರಾಮಗಳು, ಕೂಡ್ಲಿಗಿ ತಾಲ್ಲೂಕಿನ 10 ಗ್ರಾಮಗಳು, ಸಂಡೂರು ತಾಲ್ಲೂಕಿನ 07 ಗ್ರಾಮಗಳು ಮತ್ತು ಸಿರುಗುಪ್ಪ ತಾಲ್ಲೂಕಿನ 07 ಗ್ರಾಮಗಳು **ಒಟ್ಟು 52 ಗ್ರಾಮಗಳ ಪಟ್ಟಿಯನ್ನು** ಅನುಮೋದನೆ ನೀಡಲು ಓದಲಾಗಿದೆ (3)ರ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ನಿಯಮಗಳನ್ವಯ ಪರಿಶೀಲಿಸಿದ್ದು, ಆಯ್ಕೆ ಪಟ್ಟಿಯನ್ನು ಅಧಿಕೃತವಾಗಿ ಹೊರಡಿಸಲು ಸರ್ಕಾರಿ ಆದೇಶದ ಅಗತ್ಯವಿದೆ. ಅನುಬಂಧದಲ್ಲಿರುವ ಬಳ್ಳಾರಿ ಜಿಲ್ಲೆಯ 7 ತಾಲ್ಲೂಕುಗಳ **ಒಟ್ಟು 52 ಗ್ರಾಮಗಳಲ್ಲಿ** ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತವನ್ನು ಅನುಷ್ಠಾನಗೊಳಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:71:ಸುಗ್ರಾಯೋ:2012. ಬೆಂಗಳೂರು, ದಿನಾಂಕ:08.11.2012**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ **ಬಳ್ಳಾರಿ ಜಿಲ್ಲೆಯ 7 ತಾಲ್ಲೂಕುಗಳ 52** ಗ್ರಾಮಗಳಿಗೆ ಅನುಬಂಧದಲ್ಲಿ ನಮೂದಿಸಿರುವಂತೆ ಸದರಿ ಗ್ರಾಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ. ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತವನ್ನು ಅನುಷ್ಠಾನಗೊಳಿಸುವಾಗ ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಆದೇಶಿಸಿದೆ.

1. ಓದಲಾಗಿದೆ (1)ರ ಸರ್ಕಾರಿ ಆದೇಶದಲ್ಲಿ ಹಾಗೂ ಓದಲಾಗಿದೆ (2)ರ ಸುತ್ತೋಲೆಯಲ್ಲಿ ಹೊರಡಿಸಲಾದ ಯೋಜನಾ ಮಾರ್ಗಸೂಚಿ ಪ್ರತಿ ಗ್ರಾಮಕ್ಕೆ ಸಂಬಂಧಿಸಿದಂತೆ ಸಮಗ್ರ ಅಭಿವೃದ್ಧಿ ಯೋಜನೆಯನ್ನು ರೂಪಿಸಿ ಅನುಮೋದನೆ ನೀಡಿ ಕಾರ್ಯಗತಗೊಳಿಸುವುದು.
2. ಸರ್ಕಾರಿ ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-1ರಲ್ಲಿ ಸೂಚಿಸಿದ ತಾಲ್ಲೂಕುವಾರು ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಕಾರ್ಯಕ್ರಮವನ್ನು ಕೈಗೊಳ್ಳುವುದು.
3. ಗ್ರಾಮವಾರು ಅನುದಾನವನ್ನು ನಿಗದಿಪಡಿಸುವಾಗ ಗ್ರಾಮದ ಜನಸಂಖ್ಯೆಗನುಗುಣವಾಗಿ ತಲಾನುದಾನ ನಿಯಮಕ್ಕೆ ತಕ್ಕಂತೆ ನಿಗದಿಪಡಿಸಿಕೊಳ್ಳತಕ್ಕದ್ದು.
4. ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-2ರ ವೇಳಾಪಟ್ಟಿಗನುಗುಣವಾಗಿ ಕಾರ್ಯಾನುಷ್ಠಾನ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು(ಸು.ಗ್ರಾ) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಯನ್ನು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ.
2. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಬಳ್ಳಾರಿ.
3. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮಾನ್ಯ ಉಪ ಮುಖ್ಯ ಮಂತ್ರಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಮುಖ್ಯ ಲೆಕ್ಕಾಧಿಕಾರಿ ಮತ್ತು ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ.
6. ಸಂಕಲನಕಾರರು, ರಾಜ್ಯಪತ್ರ, ಬೆಂಗಳೂರು.
7. ಮಹಾಲೇಖಪಾಲರು, ಬೆಂಗಳೂರು.
8. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪ. ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9. ಸಂಪಾದಕರು, ಕರ್ನಾಟಕ ವಿಕಾಸ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.
10. ಹೆಚ್ಚುವರಿ.

ಅನುಬಂಧ

ಬಳ್ಳಾರಿ ಜಿಲ್ಲೆಯ 5ನೇ ಹಂತದ ಸುವರ್ಣ ಗ್ರಾಮೋದಯ ಯೋಜನೆ - ಅನುಮೋದಿತ ಗ್ರಾಮಗಳ ಪಟ್ಟಿ

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:71:ಸುಗ್ರಾಯೋ:2012 ದಿ:08.11.2012.

ಜಿಲ್ಲೆ: ಬಳ್ಳಾರಿ

| ಕ್ರ.ಸಂ. | ತಾಲ್ಲೂಕು | ಕ್ರ.ಸ. | ಗ್ರಾಮಗಳ ಹೆಸರು | 2001ರ ಜನಗಣತಿ ಪ್ರಕಾರ ಜನಸಂಖ್ಯೆ | ತಾಲ್ಲೂಕುವಾರು ನಿಗದಿಪಡಿಸಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|---|
| 1 | ಬಳ್ಳಾರಿ | 1 | ಸಂಗನಕಲ್ಲು | 6802 | 169.82 |
| | | 2 | ಹರಗಿನದೋಣಿ | 2028 | 50.63 |
| | | 3 | ಮಿಂಚೇರಿ | 2716 | 67.81 |
| | | 4 | ಎಂ.ಗೋನಾಳು | 2129 | 53.15 |
| | | 5 | ದಾಸರ ನಾಗೇನಹಳ್ಳಿ | 1662 | 41.49 |
| | | 6 | ಚಾನಾಳ್ | 3431 | 85.66 |
| | | 7 | ಸೋಮಸಮುದ್ರ | 7107 | 177.43 |
| | | 8 | ದಮ್ಮೂರು | 3685 | 92.00 |
| | | 9 | ಬಸರಕೋಡು | 2282 | 56.97 |
| | | 10 | ಹೆಚ್.ವೀರಾಪುರ | 3606 | 90.03 |
| | | | **ಒಟ್ಟು** | **35448** | **885.00** |
| 2 | ಹೂವಿನಹಡಗಲಿ | 1 | ಕೊಂಬಳಿ | 3278 | 82.65 |
| | | 2 | ಕಾಲ್ವಿ(ಕಾಲ್ವಿ ತಾಂಡ) | 4604 | 116.08 |
| | | 3 | ಕೊಮಾರನಹಳ್ಳಿ | 3115 | 78.54 |
| | | 4 | ಮೈಲಾರ | 3674 | 92.63 |
| | | 5 | ನಂದಿಹಳ್ಳಿ | 1789 | 45.11 |
| | | | **ಒಟ್ಟು** | **16460** | **415.00** |
| 3 | ಹೊಸಪೇಟೆ | 1 | ದೇವಸಮುದ್ರ | 6189 | 153.18 |
| | | 2 | ಗಾದಿಗನೂರು | 4513 | 111.70 |
| | | 3 | ಇಂಗಳಗಿ | 1948 | 48.22 |
| | | 4 | ಭುವನಹಳ್ಳಿ | 1147 | 28.39 |
| | | 5 | ಕಲ್ಲಹಳ್ಳಿ | 1459 | 36.11 |
| | | 6 | ವಡ್ಡರಹಳ್ಳಿ | 988 | 24.45 |
| | | 7 | ಗೊಲ್ಲರಹಳ್ಳಿ | 1533 | 37.94 |
| | | | **ಒಟ್ಟು** | **17777** | **440.00** |

| ಕ್ರ.ಸಂ. | ತಾಲ್ಲೂಕು | ಕ್ರ.ಸ. | ಗ್ರಾಮಗಳ ಹೆಸರು | 2001ರ ಜನಗಣತಿ ಪ್ರಕಾರ ಜನಸಂಖ್ಯೆ | ತಾಲ್ಲೂಕುವಾರು ನಿಗದಿಪಡಿಸಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|---|
| 4 | ಹಗರಿಬೊಮ್ಮನಹಳ್ಳಿ | 1 | ಅಲಬೂರು | 3058 | 78.09 |
| | | 2 | ಬನ್ನಿಗೋಳ | 2180 | 55.67 |
| | | 3 | ಕುಡುತಿನಿ ಮಗ್ಗಿ | 1651 | 42.16 |
| | | 4 | ಕೆ.ಕೋಡಿಹಳ್ಳಿ | 378 | 9.65 |
| | | 5 | ಕಡ್ಲಬಾಳು | 7007 | 178.93 |
| | | 6 | ಬನ್ನಿಕಲ್ಲು | 3662 | 93.51 |
| | | | **ಒಟ್ಟು** | **17936** | **458.00** |
| 5 | ಕೂಡ್ಲಿಗಿ | 1 | ತಿಮ್ಮಲಾಪುರ | 1268 | 33.00 |
| | | 2 | ಕಂದಗಲ್ಲು | 1953 | 50.82 |
| | | 3 | ಕೋಡಿಹಳ್ಳಿ | 1579 | 41.09 |
| | | 4 | ಹರೂದಿ -ಎ.ದಿಬ್ಬದಹಳ್ಳಿ | 1711 | 44.52 |
| | | 5 | ಮಾಕನಡಕು-ಕುರಿಹಟ್ಟಿ | 4476 | 116.47 |
| | | 6 | ಅಮಲಾಪುರ-ಸಿದ್ದಯ್ಯನಹಟ್ಟಿ | 1951 | 50.77 |
| | | 7 | ನಿಂಬಳಗೇರಿ-ಗಾಣಗಟ್ಟಿ | 4534 | 117.98 |
| | | 8 | ಜರ್ಮಲಿ-ಗೆದ್ದಲಗಟ್ಟಿ | 2758 | 71.77 |
| | | 9 | ತಿಪ್ಪೇಹಳ್ಳಿ ಕಾತ್ರಿಕೇನಹಟ್ಟಿ | 2035 | 52.95 |
| | | 10 | ಹಾಲಸಾಗರ-ಬೋರಯ್ಯನಹಟ್ಟಿ | 2791 | 72.63 |
| | | | **ಒಟ್ಟು** | **25056** | **652.00** |
| 6 | ಸಂಡೂರು | 1 | ಸುಶೀಲಾನಗರ | 3833 | 93.14 |
| | | 2 | ಬನ್ನಿಹಟ್ಟಿ | 1528 | 37.13 |
| | | 3 | ರಾಜಾಪುರ | 1922 | 46.70 |
| | | 4 | ದೇವರ ಮಲ್ಲಾಪುರ | 2186 | 53.12 |
| | | 5 | ಭುಜಂಗನಗರ | 4672 | 113.53 |
| | | 6 | ನಾಗಲಾಪುರ | 1538 | 37.37 |
| | | 7 | ದೌಲತ್ ಪುರ | 2840 | 69.01 |
| | | | **ಒಟ್ಟು** | **18519** | **450.00** |
| 7 | ಸಿರುಗುಪ್ಪ | 1 | ಉಪ್ಪಾರ ಹೊಸಹಳ್ಳಿ | 3252 | 80.20 |
| | | 2 | ತಾಳೂರು | 4343 | 107.10 |
| | | 3 | ಹಾಗಲೂರು | 2673 | 65.92 |
| | | 4 | ಅರಳಿಗನೂರು | 2339 | 57.68 |
| | | 5 | ಮೊಪ್ಪನಾಳು | 1433 | 35.34 |
| | | 6 | ಅಗಸನೂರು | 2572 | 63.43 |
| | | 7 | ಕೊಂಚಿಗೇರಿ | 3014 | 74.33 |
| | | | **ಒಟ್ಟು** | **19626** | **484.00** |
| | | | **ಜಿಲ್ಲೆಯ ಒಟ್ಟು ಮೊತ್ತ** | **150822** | **3784.00** |

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಸುಗ್ರಾ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ